ಚನ್ನ ಪಟ್ಟಣಕ್ಕೆ ಅಗ್ನಿಶಾಮಕ ಠಾಣೆ.

383 (401) ಶ್ರೀ ಸಾದತ್ ಅಲಿ ಖಾನ್ (ಚನ್ನ ಪಟ್ಟಣ):- ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ವರ್ಷ ಚನ್ನಪಟ್ಟಣದಲ್ಲಿ ಅಗ್ನಿಶಾಮಕ ಠಾಣೆ ತೆರೆಯಲು ಸರ್ಕಾರದ ಮಂಜೂರಾತಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇಲ್ಲಿಯವರೆಗೆ ಕಟ್ಟಡದ ಕೆಲಸವನ್ನು ತೆಗೆದುಕೊಂಡಿರುವುದಿಲ್ಲವೇ?

ಇ) ಹಾಗಿದ್ದಲ್ಲಿ ಈ ಕೆಲಸಗಳನ್ನು ತೆಗೆದುಕೊಳ್ಳಲು ತಡವಾಗಿರುವ ಬಗ್ಗೆ ಕಾರಣಗಳೇನು?

ಈ) ಯಾವಾಗ ಕಟ್ಟಡದ ಕೆಲಸವನ್ನು ಪ್ರಾರಂಭಿಸಲಾಗುವುದು?

ಶ್ರೀ ಧರ್ಮಸಿಂಗ್ (ಅಬಕಾರಿ ಮತ್ತು ಗೃಹ ಸಚಿವರು):-

ಅ) ಚನ್ನಪಟ್ಟಣ ಮತ್ತು ರಾಮನಗರದ ಮಧ್ಯೆ ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸಲು 1991-92ನೇ ಆರ್ಥಿಕ ಸಾಲಿನಲ್ಲಿ ಮಂಜೂರಾತಿ ನೀಡಲಾಗಿದೆ.

ಆ) ಇಲ್ಲ.

ಇ) ಜಮೀನು ಮತ್ತು ಆಯವ್ಯಯದ ಅನುದಾನವಿಲ್ಲದ ಕಾರಣ ಠಾಣೆಯ ಕಟ್ಟಡ ಕಾರ್ಯದಲ್ಲಿ ವಿಳಂಬವಾಗುತ್ತಿದೆ.

ಈ) ಕೃಷಿ ಮಾರುಕಟ್ಟೆ ಇಲಾಖೆಯು ಜಮೀನನ್ನು ಒದಗಿಸಿದ ಕೂಡಲೇ, ಹಾಗೂ ಆಯವ್ಯಯದಲ್ಲಿ ಅನುಧಾನವನ್ನು ಒದಗಿಸಿದ ನಂತರ ಸರ್ಕಾರ ಕಟ್ಟಡದ ನಿರ್ಮಾಣ ಕಾರ್ಯವನ್ನು ಕೂಡಲೇ ತೆಗೆದುಕೊಳ್ಳಲಾಗುವುದು.

ಮಂತ್ರಿಗಳವರ ಕಛೇರಿ ಬಳಕೆಗಾಗಿ ಎಲೆಕ್ಟ್ರಾನಿಕ್ ಬೆರಳಚ್ಚು ಯಂತ್ರ ಖರೀದಿ

385 (543) ಶ್ರೀ ರಾಮಲಿಂಗ ರೆಡ್ಡಿ (ಜಯನಗರ):- ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ, ದಯವಿಟ್ಟು ಉತ್ತರಿಸುವರೆ?

ಅ) ಮಂತ್ರಿಗಳವರ ಕಛೇರಿ ಬಳಕೆಗಾಗಿ ಎಷ್ಟು ಎಲೆಕ್ಟ್ರಾನಿಕ್ ಬೆರಳಚ್ಚು ಯಂತ್ರಗಳನ್ನು ಖರೀದಿಸಲಾಗಿದೆ?

ಆ) ಎಲೆಕ್ಟ್ರಾನಿಕ್ ಬೆರಳಚ್ಚು ಯಂತ್ರಗಳಿಗೆ ತಗುಲಿದ ಪೂರ್ಣ ವೆಚ್ಚ ಎಷ್ಟು?

ಇ) ಆ ಯಂತ್ರಗಳನ್ನು ಸರಬರಾಜು ಮಾಡಿದ ಕಂಪನಿಗಳ ಹೆಸರು?

ಈ) ಇದರ ಬಗ್ಗೆ ವರ ಪಟ್ಟಿಯನ್ನು ಕರೆಯಲಾಗಿತ್ತೆ?

ಉ) ಆಡಳಿತ ವ್ಯವಹಾರವೆಲ್ಲಾ ಕನ್ನಡದಲ್ಲಿರುವಾಗ ಮಂತ್ರಿಗಳವರ ಕಛೇರಿಗ ಇಂತಹ ಎಲೆಕ್ಟ್ರಾನಿಕ್ ಬೆರಳಚ್ಚು ಯಂತ್ರಗಳನ್ನು ಕೊಂಡುಕೊಳ್ಳುವ ಅವಶ್ಯಕತೆ ಇತ್ತೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):-

ಅ) 35

ಆ) 8,60,600-00

ಇ) 1) ಮೆ: ಕಿಯೋನಿಕ್ಸ್

2) ಮೆ: ಗೊದ್ರೇಜ್ ಮತ್ತು ಬಾಯ್ಸ್ ಮಾನ್ಯುಫ್ಯಾಕ್ಚರಿಂಗ್ ಕಂ.

ಈ) ಹೌದು.